ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1344
ಸದಸ್ಯರ ಹೆಸರು	ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	24.12.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಕೆ.ಆರ್.ಐ.ಡಿ.ಎಲ್. ಸಂಸ್ಥೆಯಲ್ಲಿ 1990 ರಿಂದ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನವೆಷ್ಟು; ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಯಾಗಿದೆ; (ವಿವರವಾದ ಮಾಹಿತಿಯನ್ನು ನೀಡುವುದು)	ಕೆ.ಆರ್.ಐ.ಡಿ.ಎಲ್. ಸಂಸ್ಥೆಯಲ್ಲಿ 1990 ರಿಂದ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನದ ವಿವರಗಳ ಜಿಲ್ಲಾವಾರು, ವರ್ಷವಾರು ಮಾಹಿತಿಯನ್ನು ತಯಾರಿಸಿ **ಅನುಬಂಧ-1** ರಲ್ಲಿ ನೀಡಿದೆ.
ಆ.	ಕೆ.ಆರ್.ಐ.ಡಿ.ಎಲ್. ಸಂಸ್ಥೆಯಲ್ಲಿ 1990 ರಿಂದ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನಕ್ಕಿಂತ ಹೆಚ್ಚುವರಿಯಾದ ವೆಚ್ಚ ರೂ.100.00 ಕೋಟಿಗಿಂತಲೂ ಅಧಿಕವಾಗಿದ್ದು, ಇದನ್ನು ಸಂಬಂಧಪಟ್ಟ ಸಂಸ್ಥೆಯ ಅಧಿಕಾರಿಗಳಿಂದ ಬಡ್ಡಿ ಸಹಿತ ವಸೂಲಾಗಿತೆ ಈ ಹಿಂದೆ ಆಡಳಿತ ಮಂಡಳಿ ತೀರ್ಮಾನದ ಮೇಲೆ ಕೈಗೊಂಡ ಕ್ರಮವೇನು; (ಜಿಲ್ಲಾವಾರು ಹಾಗೂ ಪದನಾಮ ಸಹಿತ ವಿವರವನ್ನು ನೀಡುವುದು)	ದಿನಾಂಕ 29.01.2011 ರಂದು ನಡೆದ 165ನೇ ಆಡಳಿತ ಮಂಡಳಿ ಸಭೆಯಲ್ಲಿ "2001-02 ರಿಂದ 2008-09 ಸಾಲಿನವರೆಗೆ ಸುಮಾರು ರೂ.43.97 ಕೋಟಿಗಳಷ್ಟು ಬಾಕಿ ಹಣ (Debtors) ಇದ್ದು, ಈ ಬಾಬ್ತಿನಲ್ಲಿ ರೂ.13.91 ಕೋಟಿಗಳಷ್ಟನ್ನು ಲೆಕ್ಕಪತ್ರದಲ್ಲಿ Debtors ಶೀರ್ಷಿಕೆಯಡಿ ಪ್ರಾವಿಷನ್ ಮಾಡಿದ್ದು, ಇನ್ನೂ ರೂ.30.60 ಕೋಟಿಗಳಷ್ಟು Debtors ಇದ್ದು, ವಿವಿಧ ಇಲಾಖೆಗಳಿಂದ ಹಣ ಬರಬೇಕಿರುತ್ತದೆ". "ಇನ್ನು ಮುಂದೆ ಯಾವ ಯಾವ ಅಧಿಕಾರಿಗಳ ಅವಧಿಯಲ್ಲಿ ಕಾಮಗಾರಿಗೆ ಹೆಚ್ಚುವರಿ ಖರ್ಚಾಗಿದೆಯೋ ಆದೆ ಜಂಟಿ / ಉಪ /ಸಹಾಯಕ ನಿರ್ದೇಶಕರು / ಕಾರ್ಯದಳಪತಿ/ಸಹಾಯಕ ಕಾರ್ಯದಳಪತಿ ಯವರನ್ನು ಜವಾಬ್ದಾರರನ್ನಾಗಿಸಲು ಮಂಡಳಿಯು ತೀರ್ಮಾನಿಸಿತು. ಅಲ್ಲದೇ ಈ ಪ್ರಕ್ರಿಯೆಗೆ ಅವರು ಬೇರೆ ಪ್ರಾಜೆಕ್ಟ್ ನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಹೆಚ್ಚುವರಿ ಖರ್ಚು ಮಾಡಿದ ಹಣವನ್ನು ವಸೂಲಿ ಮಾಡಲು ಆಗದಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಇನ್ನು ಮುಂದೆ ಅಂತಹ ಅಧಿಕಾರಿ ಅಥವಾ ಇಂಜಿನಿಯರ್ ಗಳನ್ನು ಹಾಲಿ ನಿರ್ವಹಿಸುತ್ತಿರುವ ಕರ್ತವ್ಯದಿಂದ ಬಿಡುಗಡೆ ಮಾಡಿ ಹೆಚ್ಚುವರಿ ಖರ್ಚಾದ ಹಣವನ್ನು ಸಂಬಂಧಪಟ್ಟ ಇಲಾಖೆಯಿಂದ ವಸೂಲಿ ಮಾಡಲು ನಿರ್ದೇಶನ ನೀಡುವುದಕ್ಕೆ ವ್ಯವಸ್ಥಾಪಕ ನಿರ್ದೇಶಕರಿಗೆ

(1)

		ಅಧಿಕಾರವನ್ನು ನೀಡಲು ಮಂಡಳಿಯು ತೀರ್ಮಾನಿಸಿತು ಹಾಗೂ ಕರ್ತವ್ಯದಿಂದ ಬಿಡುಗಡೆಗೊಂಡ ಅಧಿಕಾರಿ / ಇಂಜಿನಿಯರ್ ರವರ ಪ್ರಭಾರ ವಹಿಸಿಕೊಳ್ಳಲು ಪರ್ಯಾಯ ವ್ಯವಸ್ಥೆ ಮಾಡಲು ಸಹ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲು ನಿರ್ಣಯಿಸಲಾಯಿತು". ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯ 1989-90ನೇ ಸಾಲಿನಿಂದ 2020-21ನೇ ಸಾಲಿನ ವಾರ್ಷಿಕ ವರದಿಗಳ ಪ್ರಕಾರ ಸಂಸ್ಥೆಯು ಒಟ್ಟು ಸ್ವೀಕರಿಸಿದ ಮೊತ್ತ ರೂ.30046.06 ಕೋಟಿಗಳಲ್ಲಿ ಅಂತಿಮ ಬಿಲ್ಲುಗಳ ಹೊಂದಾಣಿಕೆ ನಂತರ ಒಟ್ಟು ಲೆಕ್ಕಿಸಿದ Sundry Debtors (ವಿವಿಧ ಸಾಲಗಾರರು) ಮೊತ್ತ ರೂ.88.11 ಕೋಟಿ ಇದ್ದು, ವಿವಿಧ ಕಾಮಗಾರಿ ವಹಿಸುವ ಇಲಾಖೆಗಳಿಂದ ರೂ.16.13 ಕೋಟಿ ವಸೂಲಿ ಮಾಡಲಾಗಿದ್ದು, ರೂ.65.25 ಕೋಟಿ write off (ವಸೂಲಾತಿ ಮಾಡಬಹುದಾದ ಮೊತ್ತ) ಮಾಡಲಾಗಿರುತ್ತದೆ ಹಾಗೂ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ರೂ.4.36 ಕೋಟಿ write off ಮಾಡಲು ಅವಕಾಶ ಮಾಡಲಾಗಿದೆ. ಇದನ್ನು ಹೊರತುಪಡಿಸಿ ಬಾಕಿ ರೂ.0.14 ಕೋಟಿ ಮಾತ್ರ ಇರುತ್ತದೆ. ಕಾಮಗಾರಿಗಳ ನಿರ್ವಹಣೆ ಸಂಬಂಧ ವಿವಿಧ ಇಲಾಖೆಗಳಿಂದ ಬರಬೇಕಾದ ಬಾಕಿ ಅನುದಾನ ಪಡೆಯಲು ಪತ್ರಗಳನ್ನು ನಿರಂತರವಾಗಿ ಈ ಕಛೇರಿಯಿಂದ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರಿಂದ ಸಂಬಂಧಪಟ್ಟ ಕಾಮಗಾರಿ ವಹಿಸಿದ ಇಲಾಖೆಗಳಿಗೆ ಸಲ್ಲಿಸಲಾಗಿದೆ. ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ.
ಇ.	ಅಧಿಕೃತ ಜ್ಞಾಪನ ಪತ್ರ ಸಂ: ಕಭೂಸೇನಾ/ ಆಡಳಿತ/ಸಿಆರ್-224/2008-09 ದಿನಾಂಕ 20.03.2009 ರಂತೆ ಇಲಾಖಾ ಆದೇಶದಂತೆ ನಡೆದ ವಿಚಾರಣೆ ವೇಳೆ ಇಲಾಖಾ ಹಣ ದುರುಪಯೋಗ ಮಾಡಿ, ವಜಾ ಆದ ಇಂಜಿನಿಯರ್ ಗಳಿಂದ ವಸೂಲು ಮಾಡಿದ ಹಣದ ವಿವರ ಹಾಗೂ ಯಾರಿಂದ ಎಷ್ಟೆಷ್ಟು ಹಣ ವಸೂಲಾತಿ ಮಾಡಲಾಗಿದೆ? (ವಿವರವನ್ನು ನೀಡುವುದು)	ಇಲಾಖಾ ವಿಚಾರಣೆ ವೇಳೆ ವಜಾಗೊಂಡ ಒಟ್ಟು 16 ಅಧಿಕಾರಿ / ಅಭಿಯಂತರರುಗಳಿಂದ ಸಂಸ್ಥೆಗೆ ನಷ್ಟ ಆದ ಹಣ ವಸೂಲಿ ಮಾಡಲು ಆದೇಶಿಸಿದ್ದು, ಈ ಪೈಕಿ 11 ಅಧಿಕಾರಿ / ಅಭಿಯಂತರರುಗಳಿಂದ ನಷ್ಟದ ಹಣ ವಸೂಲಿ ಮಾಡಲಾಗಿರುತ್ತದೆ. ಬಾಕಿ 05 ಅಧಿಕಾರಿ / ಅಭಿಯಂತರರುಗಳಿಂದ ನಿಯಮಾನುಸಾರ ಹಣ ವಸೂಲಾತಿ ಮಾಡಲು ಕ್ರಮಕೈಗೊಳ್ಳಲಾಗುವುದು. ವಿವರಗಳನ್ನು **ಅನುಬಂಧ-3** ರಲ್ಲಿ ನೀಡಿದೆ.

(2)